### ಪೌರತ್ವ ಕಾಯಿದೆ ವಿರುದ್ಧ ರಾಜ್ಯಾದ್ಯಂತ ಭುಗಿಲೆದ್ದ ಆಕ್ರೋಶ । ಹಿಂಸೆಗೆ ತತ್ತರಿಸಿದ ಮಂಗಳೂರಿನಲ್ಲಿ ಕರ್ಫ್ಯೂ ಜಾರಿ

### ಇತಿಹಾಸಕಾರ ರಾಮಚಂದ್ರ ಗುಹಾ ಸಹಿತ ಹಲವರು ವಶಕ್ಕೆ । ಶಾಂತಿ ಕಾಪಾಡಲು ಸಿಎಂ, ಮುಸ್ಲಿಂ ಮುಖಂಡರ ಮನವಿ

# ಹಿಂಸಾತ್ಮಕ ಪ್ರತಿಭಟನೆ, ಗುಂಡಿಗೆ 2 ಬಲಿ

ವಿಕ ಸುದ್ದಿಲೋಕ
ಮಂಗಳೂರು/ಬೆಂಗಳೂರು

ಪೌರತ್ವ ತಿದ್ದುಪಡಿ ಕಾಯಿದೆ ವಿರುದ್ಧ ಗುರುವಾರ ರಾಜ್ಯಾದ್ಯಂತ ಪ್ರತಿಭಟನೆ ಭುಗಿಲೆದ್ದು ಹಿಂಸಾರೂಪ ತಾಳಿದೆ. ಮಂಗಳೂರಿನಲ್ಲಿ ಪೊಲೀಸ್ ಗೋಲಿಬಾರ್‌ಗೆ ಇಬ್ಬರು ಬಲಿಯಾಗಿದ್ದು, 20 ಮಂದಿ ಪೊಲೀಸರು ಸೇರಿದಂತೆ ಹಲವರು ಗಾಯಗೊಂಡಿದ್ದಾರೆ.



ಪೊಲೀಸರಿಗೂ ಕಲ್ಲೇಟು.

ಬೆಂಗಳೂರಿನಲ್ಲಿ ಇತಿಹಾಸಕಾರ ರಾಮಚಂದ್ರ ಗುಹಾ ಸೇರಿದಂತೆ ರಾಜ್ಯಾದ್ಯಂತ ಸಾವಿರಾರು ಮಂದಿಯನ್ನು ಪೊಲೀಸರು ವಶಕ್ಕೆ ಪಡೆದರು. ಈ ನಡುವೆ, ರಾಜ್ಯದಲ್ಲಿ ಶಾಂತಿ ಕಾಪಾಡುವಂತೆ ಸಿಎಂ ಬಿ.ಎಸ್. ಯಡಿಯೂರಪ್ಪ ಮತ್ತು ಮುಸ್ಲಿಂ ಮುಖಂಡರು ಮನವಿ ಮಾಡಿದ್ದಾರೆ.

ರಾಜ್ಯದಲ್ಲಿ ಹಲವಾರು ಸಂಘಟನೆಗಳು ಗುರುವಾರ ಬೀದಿಗಿಳಿಯುವ ಮುನ್ಸೂಚನೆ ಪಡೆದ ರಾಜ್ಯ ಪೊಲೀಸ್ ಇಲಾಖೆ ಸಂಭಾವ್ಯ ಹಿಂಸಾಚಾರವನ್ನು ತಪ್ಪಿಸುವುದಕ್ಕಾಗಿ ಡಿಸೆಂಬರ್ 21ರವರೆಗೆ ಸೆಕ್ಷನ್ 144ರಡಿ ನಿಷೇಧಾಜ್ಞೆ ವಿಧಿಸಿತ್ತು. ಆದರೆ, ನಾನಾ ಜಿಲ್ಲೆಗಳಲ್ಲಿ ಬೆಳಗ್ಗೆಯೇ ಬೀದಿಗಿಳಿದ ಪ್ರತಿಭಟನಾಕಾರರು ನಿಷೇಧಾಜ್ಞೆಯನ್ನೂ ಲೆಕ್ಕಿಸದೆ ಜಮಾಯಿಸಿದರು. ಬೆಂಗಳೂರಿನ ಟೌನ್‌ಹಾಲ್ ಎದುರು ದೊಡ್ಡ ಗುಂಪೇ ಸೇರಿದ್ದರಿಂದ ಪೊಲೀಸರು ಅವರನ್ನು ನಿಯಂತ್ರಿಸಲು ಹರಸಾಹಸಪಟ್ಟರು. ಈ ನಡುವೆ, ಗಲಭೆಗೆ ಸಂಬಂಧಿಸಿದಂತೆ ರಾಜ್ಯಾದ್ಯಂತ ನೂರಾರು ಮಂದಿಯನ್ನು ಬಂಧಿಸಲಾಗಿದೆ. ದುಷ್ಕರ್ಮಿಗಳ ಪತ್ತೆಗೆ ಬಲೆಬೀಸಲಾಗಿದೆ.

ಕಲಬುರಗಿಯಲ್ಲೂ 10,000ಕ್ಕೂ ಅಧಿಕ ಮಂದಿ ಬೀದಿಗಿಳಿದರು.

**ದಾಂಧಲೆಗೆ ಇಳಿದ ಜನ ಹಲವು ಜಿಲ್ಲೆಗಳು ತಲ್ಲಣ**

**ಕಲಬುರಗಿ ಪೂರ್ಣ ಬಂದ್ »13**

**ದೇಶದೆಲ್ಲೆಡೆ ಹೋರಾಟ »14**



ಪೌರತ್ವ ತಿದ್ದುಪಡಿ ಕಾಯಿದೆ ವಿರುದ್ಧ ಮಂಗಳೂರಿನ ಬಂದರು ಪ್ರದೇಶದಲ್ಲಿ ಗುರುವಾರ ಪ್ರತಿಭಟನೆ ವೇಳೆ ದುಷ್ಕರ್ಮಿಗಳು ಟಯರ್‌ಗೆ ಬೆಂಕಿ ಹಚ್ಚಿ, ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿದರು.



**ಮುಖ್ಯಮಂತ್ರಿ ಯಡಿಯೂರಪ್ಪ ಅವರು ನಮ್ಮ ಹಕ್ಕುಗಳನ್ನು ರಕ್ಷಿಸುವ ಭರವಸೆ ನೀಡಿದ್ದಾರೆ. ಶಾಂತಿ ಕಾಪಾಡಲು ಮನವಿ ಮಾಡಿದ್ದಾರೆ. ನಾವ್ಯಾರೂ ಹಿಂಸೆಗೆ ಪ್ರಚೋದನೆ ಕೊಡುತ್ತಿಲ್ಲ, ಮಂಗಳೂರಿನ ಘಟನೆ ನಡೆಯಬಾರದಿತ್ತು. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಿ. ನಾವು ಪ್ರತಿಭಟನೆ ಕೈಬಿಟ್ಟಿದ್ದೇವೆ.**

**-ಶಕೀರ್ ಅಹ್ಮದ್**
ಮುಸ್ಲಿಂ ಮುಖಂಡ

## ಮಂಗಳೂರಿನಲ್ಲಿ ಪೊಲೀಸರ ಮೇಲೆಯೇ ಆಕ್ರಮಣ

ಮಂಗಳೂರಿನ ಸ್ಟೇಟ್ ಬ್ಯಾಂಕ್ ಪರಿಸರದಲ್ಲಿ ಮಧ್ಯಾಹ್ನ 3 ಗಂಟೆ ವೇಳೆಗೆ ಒಮ್ಮೆಗೇ ಯುವಕರು ಗುಂಪು ಸೇರಲಾರಂಭಿಸಿದಾಗ ಪೊಲೀಸರು ಧಾವಿಸಿ ಚದುರಿಸಲು ಮುಂದಾದರು. ಆಗ ಯುವಕರು ಪೊಲೀಸರ ಮೇಲೆಯೇ ಕಲ್ಲು ತೂರಾಟ ನಡೆಸಿದರು. ಪರಿಸ್ಥಿತಿ ಕೈಮೀರಿದಾಗ ಪೊಲೀಸರು ಲಾಠಿ ಚಾರ್ಜ್, ಅಶ್ರುವಾಯು, ಗಾಳಿಯಲ್ಲಿ ಗುಂಡು ಹಾರಾಟ ನಡೆಸಿದರು. ಆದರೆ, ಸಾವಿರಾರು ಪ್ರತಿಭಟನಾಕಾರರು ಪೊಲೀಸರ ಮೇಲೆಯೇ ದಾಳಿ ನಡೆಸಿದರು. ಬಂದರು ಠಾಣೆಯ ಮೇಲೂ ಆಕ್ರೋಶಿತರ ದಾಳಿ ನಡೆಯಿತು. ಈ ವೇಳೆ ಗಾಳಿಯಲ್ಲಿ ಗುಂಡು ಹಾರಿಸಿದರು. ಪೊಲೀಸರ ಗುಂಡಿಗೆ ಮಂಗಳೂರು ಕಂದಕ್ ಪ್ರದೇಶದ ಜಲೀಲ್ (49) ಮತ್ತು ಕುದ್ರೋಳಿಯ ನೌಶೀನ್(23) ಮೃತಪಟ್ಟವರು. ಜಲೀಲ್ ಮೀನು ಮಾರುವವರಾದರೆ, ನೌಶೀನ್ ಮೆಕ್ಯಾನಿಕ್. ಘಟನೆಯಲ್ಲಿ 20ಕ್ಕೂ ಅಧಿಕ ಪೊಲೀಸರು ಗಾಯಗೊಂಡಿದ್ದು, ವಾಹನಗಳೂ ಜಖಂಗೊಂಡಿವೆ.

## ಬೆಂಕಿ ಹೇಳಿಕೆ: ಖಾದರ್ ವಿರುದ್ಧ ಕ್ರಿಮಿನಲ್ ಕೇಸ್

**ಮಂಗಳೂರು:** ಪೌರತ್ವ ಕಾಯಿದೆ ಜಾರಿಯಾದರೆ ರಾಜ್ಯ ಹೊತ್ತಿ ಉರಿಯಲಿದೆ ಎಂದು ಶಾಸಕ ಯು.ಟಿ. ಖಾದರ್ ಪ್ರತಿಭಟನೆ ಸಂದರ್ಭ ನೀಡಿರುವ ಬಹಿರಂಗ ಹೇಳಿಕೆ ವಿರುದ್ಧ ಬಿಜೆಪಿ ಯುವ ಮೋರ್ಚಾ ಗುರುವಾರ ಪಾಂಡೇಶ್ವರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಿಸಲಾಗಿದೆ. ಖಾದರ್ ಮಾತಿನ ದಾಖಲೆ ಸಮೇತ ಕಮಿಷನರ್ ಅವರಿಗೆ ಮೊದಲು ದೂರು ನೀಡಲಾಗಿತ್ತು. ಬಳಿಕ ಪಾಂಡೇಶ್ವರ ಪೊಲೀಸ್ ಠಾಣೆಗೆ



ತೆರಳಿ ಅಧಿಕೃತವಾಗಿ ದೂರು ನೀಡಲಾಯಿತು. ಸೆಕ್ಷನ್ 124 ಎ, 153 ಎ, 153 ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಖಾದರ್ ಅವರನ್ನು ದೇಶದ್ರೋಹದ ಪ್ರಕರಣ ದಾಖಲಿಸಿ ಬಂಧಿಸಬೇಕು ಎಂದು ವಿಶ್ವ ಹಿಂದೂ ಪರಿಷತ್ ಆಗ್ರಹಿಸಿದೆ.

**22ರವರೆಗೆ ಕರ್ಫ್ಯೂ**

**ಮಂಗಳೂರು ಕಮೀಷನರೇಟ್ ವ್ಯಾಪ್ತಿಯಲ್ಲಿ ಡಿ.22ರ ಮಧ್ಯರಾತ್ರಿವರೆಗೆ ಕರ್ಫ್ಯೂ ಜಾರಿ. 2ದಿನ ಇಂಟರ್‌ನೆಟ್ ಬಂದ್.**

**ದ.ಕನ್ನಡದ ಶಾಲೆ, ಕಾಲೇಜುಗಳಿಗೆ ಶುಕ್ರವಾರ ರಜೆ. ರಾಜ್ಯದ ಎಂಜಿನಿಯರಿಂಗ್ ಕಾಲೇಜಿನ ಪರೀಕ್ಷೆಗಳು ಮುಂದೂಡಿಕೆ.**